# ಬಿಲೀವರ್ಸ್ ಈಸ್ಟರ್ನ್ ಚರ್ಚ್

ಮೆಟ್ರೋಪಾಲಿಟನ್ ಕಛೇರಿ, ಸಿನೊಡ್ ಸೆಕ್ರೆಟರಿಯೇಟ್, ಸೇಂಟ್ ಥಾಮಸ್ ಸಮುದಾಯ, ತಿರುವಲ್ಲಾ, ಕೇರಳ, ಭಾರತ.

## ಕುರುಬನ ಪತ್ರ

ಆಗಸ್ಟ್ - ಸೆಪ್ಟೆಂಬರ್ 2024

ಆರ್ಚ್‌ಬಿಷಪ್‌ರವರಿಗೂ, ಬಿಷಪ್‌ರವರಿಗೂ, ಘನ ಬೋಧಕರಿಗೂ, ಡೀಕನ್ ಫಾದರ್ಸ್ ರವರಿಗೂ, ಸುವಾರ್ತಿಕರಿಗೂ, ಆರ್ಡರ್ ಆಫ್ ಸಿಸ್ಟರ್ಸ್ ರವರಿಗೂ ಮತ್ತು ಜಗತ್ತಿನಾದ್ಯಂತ ಹರಡಿಕೊಂಡಿರುವ ಬಿಲೀವರ್ಸ್ ಈಸ್ಟರ್ನ್ ಚರ್ಚ್‌ನ ನಮ್ಮ ಎಲ್ಲಾ ವಿಶ್ವಾಸಿಗಳಿಗೆ ಪಿತಾ, ಪುತ್ರ, ಪವಿತ್ರಾತ್ಮನ ಹೆಸರಿನಲ್ಲಿ ಆಶೀರ್ವಾದಗಳು ಮತ್ತು ಶುಭಾಶಯಗಳು. ಆಮೆನ್! ✠

ಕ್ರಿಸ್ತನಲ್ಲಿ ಪ್ರಿಯರಾದವರೇ,

ಬಿಲೀವರ್ಸ್ ಈಸ್ಟರ್ನ್ ಚರ್ಚ್‌ನ ಮೆಟ್ರೋಪಾಲಿಟನ್ ಫಾದರ್ ಆಗಿ ಆಸನಾರೂಢನಾಗಿ ಮಾಡಲ್ಪಟ್ಟ ನಂತರದ ನನ್ನ ಮೊದಲ ಕುರುಬನ ಪತ್ರ ಇದಾಗಿದೆ. ನನ್ನ ಕುರಿತಾಗಿರುವ ನಿಮ್ಮ ಪ್ರೀತಿ ಮತ್ತು ಪ್ರಾರ್ಥನೆಗಳಿಗೆ ನಾನು ನಿಮಗೆ ಕೃತಜ್ಞನಾಗಿದ್ದೇನೆ ಎಂದು ಹೇಳುವ ಮೂಲಕ ಪ್ರಾರಂಭಿಸುತ್ತೇನೆ. ನಮ್ಮ ಪರಲೋಕದ ತಂದೆಗೆ ನಾನು ಕೃತಜ್ಞನಾಗಿದ್ದೇನೆ, ಏಕೆಂದರೆ ಆತನು ನಮಗೆ ತುಂಬಾ ನಂಬಿಗಸ್ತನಾಗಿದ್ದಾನೆ ಮತ್ತು ವಿಶೇಷವಾಗಿ ಇತ್ತೀಚಿನ ದಿನಗಳಲ್ಲಿ ಆತನ ಪ್ರೀತಿಯು ನಮಗೆ ಮಾರ್ಗದರ್ಶನ ನೀಡಿದೆ.

ಈ ಪತ್ರದ ಮೂಲಕ, ನಾನು ಕೆಲವು ಪ್ರಮುಖ ವಿಷಯಗಳ ಬಗ್ಗೆ ನಿಮ್ಮ ಗಮನವನ್ನು ಸೆಳೆಯಲು ಬಯಸುತ್ತೇನೆ.

**ಮೊದಲನೆಯದಾಗಿ:** ಅಕ್ಟೋಬರ್ 2024 ರಲ್ಲಿ ನಡೆಯುವ ಯೌವ್ವನಸ್ಥರ ಕೂಟ.

ಯುವಕರು ನಮ್ಮ ಚರ್ಚ್‌ನ ಭವಿಷ್ಯ. ಅವರು ಆಧ್ಯಾತ್ಮಿಕವಾಗಿ ಪ್ರಬಲರಾಗಿದ್ದರೆ, ಸದೃಢರಾಗಿದ್ದರೆ, ಅವರ ಸ್ಥಳೀಯ ಸಭೆಗಳಲ್ಲಿ ಮತ್ತು ಸಮುದಾಯಗಳಲ್ಲಿ ಸಕ್ರಿಯರಾಗಿದ್ದರೆ, ನಮ್ಮ ಸಭೆಯ ಭವಿಷ್ಯವು ಸುರಕ್ಷಿತವಾಗಿರುತ್ತದೆ. ಈ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು, ನಾವು 2024 ರ ಅಕ್ಟೋಬರ್‌ನಲ್ಲಿ ಯೂತ್ ಸಮ್ಮೇಳನಕ್ಕಾಗಿ ಪ್ರಾರ್ಥಿಸುತ್ತಿದ್ದೇವೆ, ಸಿದ್ಧತೆಮಾಡುತ್ತಿದ್ದೇವೆ ಮತ್ತು ಯೋಜಿಸುತ್ತಿದ್ದೇವೆ. ಅಲ್ಲಿ ವಿವಿಧ ಸೇವಾ ಪ್ರಾಂತ್ಯಗಳನ್ನು ಪ್ರತಿನಿಧಿಸುವ ಆಯ್ದ ಯುವಜನರ ಗುಂಪು ಒಟ್ಟಾಗಿ ಸೇರಿಬರಲಿದೆ. ದಯವಿಟ್ಟು ಈ ಯೂತ್ ಕೂಟಕ್ಕಾಗಿ ಮನಃಪೂರ್ವಕವಾಗಿ ಪ್ರಾರ್ಥನೆ ಮಾಡಿರಿ ಎಂದು ಮನವಿಮಾಡಿಕೊಳ್ಳುತ್ತೇನೆ.

ಆದುದರಿಂದ, ನಿಮ್ಮ ಕುಟುಂಬದ ಪ್ರಾರ್ಥನೆಗಳಲ್ಲಿ ಈ ವಿಶೇಷ ಚಟುವಟಿಕೆಗಾಗಿ ಪ್ರಾರ್ಥಿಸಿ; ಯೂತ್ ಸಮ್ಮೇಳನ ಮುಗಿಯುವವರೆಗೂ ನಿಮ್ಮ ಸಭೆಯಲ್ಲಿ ಪ್ರಾರ್ಥನಾ ಗುಂಪುಗಳನ್ನು ಆಯೋಜಿಸಿ. ಭಾಗವಹಿಸುವವರ ಸುರಕ್ಷಿತ ಪ್ರಯಾಣಕ್ಕಾಗಿ ಮತ್ತು ಎಲ್ಲಾ ವಿಧವಾದ ಸಿದ್ಧತೆಗಳಿಗಾಗಿ ಮತ್ತು ಈ ಕೂಟದಲ್ಲಿ ನಮ್ಮ ಸಭೆಯ ಯೌವ್ವನಸ್ಥರು ಪರಿಶುದ್ಧವಾದ ಜೀವನಕ್ಕೆ ಜಾಗೃತರಾಗಲಿ ಎಂದು ಪ್ರಾರ್ಥಿಸಿ.

**ಎರಡನೆಯದಾಗಿ:** ನಮ್ಮ ಪವಿತ್ರ ಸಭೆಗೆ ಸೇವೆ ಸಲ್ಲಿಸುವುದನ್ನು ಗುರಿಯಾಗಿರಿಸಿಕೊಂಡು ತರಬೇತಿ ಪಡೆಯಲು ತಮ್ಮ ಜೀವನವನ್ನು ಮುಡಿಪಾಗಿಡುವುದಕ್ಕಾಗಿ ನಮ್ಮ ಸ್ಥಳೀಯ ಸಭೆಗಳಿಂದ ಸಮರ್ಪಿತ ಯುವ ಸಹೋದರರು ಮತ್ತು ಸಹೋದರಿಯರ ಅವಶ್ಯಕತೆಯಿದೆ. ಯೇಸು ಹೇಳಿದಂತೆ, ಜನರ ಆಧ್ಯಾತ್ಮಿಕ ಅಗತ್ಯತೆಗಳು ಅಧಿಕವಾಗಿವೆ, ಆದರೆ ಆ ಅಗತ್ಯಗಳನ್ನು ಪೂರೈಸಲು ಕೆಲವರು ಮಾತ್ರ ಅಸ್ಥಿತ್ವದಲ್ಲಿದ್ದರೆ. ಆದ್ದರಿಂದ, ನಾವು ಏನು ಮಾಡಬಹುದು? ಆ ಪಾತ್ರವನ್ನು ಪೂರೈಸಬಲ್ಲ ಯುವಕರನ್ನು ಮತ್ತು ಯುವತಿಯರನ್ನು ಕಳುಹಿಸಲೆಂದು ದೇವರಲ್ಲಿ ಪ್ರಾರ್ಥಿಸಬೇಕು. (ಸಂತ ಮತ್ತಾಯ 9:36-38) ಇದು ನಮ್ಮ ಎಲ್ಲಾ ಪ್ರಾರ್ಥನಾ ಕೂಟಗಳಲ್ಲಿ - ಸಭೆಗಳಲ್ಲಿ ಮತ್ತು ನಮ್ಮ ಕುಟುಂಬಗಳಲ್ಲಿ ವರ್ಷವಿಡೀ ಸತತವಾಗಿ ಪ್ರಾರ್ಥಿಸುವ ವಿಜ್ಞಾಪನೆಯಾಗಿರಲಿ. ನೀವು ಪೋಷಕರಾಗಿದ್ದರೆ, ನಿಮ್ಮ ಮಕ್ಕಳು ದೇವರ ಸೇವೆಗೆ ತಮ್ಮ ಜೀವನವನ್ನು ಮುಡಿಪಾಗಿಡುವಂತೆ ಪ್ರಾರ್ಥಿಸಿ. ನಾವು ಮೊದಲು

ಉದಾಹರಣೆಗಳಾಗೋಣ, ಮತ್ತು ಇತರರು ಅದನ್ನು ಅನುಸರಿಸಲು ಸಾಧ್ಯವಾಗುತ್ತದೆ.

ಮೂರನೆಯದಾಗಿ: ನಮ್ಮ ಪ್ರಧಾನ ಸೆಮಿನರಿ, ಡಯೋಸಿಸನ್ ಸೆಮಿನರಿಗಳು ಮತ್ತು ಸಿಸ್ಟರ್ಸ್ ಆಫ್ ದಿ ಕ್ರಾಸ್ ತರಬೇತಿ ಕೇಂದ್ರಗಳಿಗೆ ಹೊಸ ಶೈಕ್ಷಣಿಕ ಅವಧಿಗಳು ಪ್ರಾರಂಭವಾಗಿವೆ. ತರಬೇತಿ ಪಡೆಯುತ್ತಿರುವ ಆತ್ಮೀಯ ಸಹೋದರ ಸಹೋದರಿಯರಿಗಾಗಿ ಪ್ರಾರ್ಥಿಸಿ, ಅವರು ಅಧ್ಯಯನ ಮಾಡಲು, ದೇವರ ಕೆಲಸಕ್ಕಾಗಿ ತಮ್ಮನ್ನು ತಾವು ಸಜ್ಜುಗೊಳಿಸುವಂತೆ ತರಬೇತಿ ಉತ್ತಮ ತರಬೇತಿ ಹೊಂದಿಕೊಳ್ಳಲು ಪ್ರಾರ್ಥಿಸಿರಿ.

ನಾಲ್ಕನೆಯದಾಗಿ: ಪವಿತ್ರ ಸಭೆಯ ಆರ್ಥಿಕ ಅಗತ್ಯತೆಗಳಿಗೆ ಕೊಡುವುದರಲ್ಲಿ ನಾವು ನಂಬಿಗಸ್ತರಾಗಿ ಮುಂದುವರಿಯೋಣ. ಸಂತ ಪೌಲನು ಮಕೆದೋನ್ಯ ಸಭೆಯವರ ಔದಾರ್ಯದ ಕುರಿತು ನಮಗೆ ನೆನಪಿಸುತ್ತಾನೆ, ಆ ಸಭೆಯವರ ಕಡು ಬಡತನದ ನಡುವೆಯೂ ಸಹ ಸಭೆಯು ಅದರ ಸಾಮರ್ಥ್ಯವನ್ನು ಮೀರಿ ದೇವರಿಗೆ ಕೊಟ್ಟಿದ್ದನ್ನು  ನಾವಿಲ್ಲಿ ಕಾಣುತ್ತೇವೆ**(2 ಕೊರಿ 8:1-5)**. ನಮ್ಮ ಪವಿತ್ರಯು ಸಹ ಆ ವಿಧವಾದ ಸಭೆಯಾಗಬೇಕು. ಒಬ್ಬ ಬಡ ವಿಧವೆ ಆಕೆಯ ಬಡತನದಲ್ಲಿಯೂ ತನ್ನ ಶಕ್ತಿಮೀರಿ ದೇವರಿಗೆ ಸಲ್ಲಿಸಿದ್ದನ್ನು ನಾವಿಲ್ಲಿ ಕಾಣುತ್ತೇವೆ. **(ಸಂತ ಮಾರ್ಕ 12:41-44)**. ನೆನಪಿಡಿ, ಸಂತೋಷವಾಗಿ ಕೊಡುವವನ ಮೇಲೆ ದೇವರಿಗೆ ಹೆಚ್ಚು ಪ್ರೀತಿಯುಂಟು. ಪ್ರತಿಯೊಬ್ಬನು ತನ್ನ ತನ್ನ ಹೃದಯದಲ್ಲಿ ನಿರ್ಣಯಿಸಿಕೊಂಡ ಪ್ರಕಾರ ಕೊಡಲಿ; ದುಃಖದಿಂದಾಗಲಿ ಬಲಾತ್ಕಾರದಿಂದಾಗಲಿ ಯಾರೂ ಕೊಡಬಾರದು; ಯಾಕಂದರೆ ದೇವರು ಹರ್ಷಚಿತ್ತದಿಂದ ಕೊಡುವವರನ್ನು ಪ್ರೀತಿಸುತ್ತಾನೆ **(2 ಕೊರಿ 9: 6, 7)**, ಮತ್ತು ನಾವು ದೇವರಿಗೆ ಕೊಡುವಾಗ, ಆತನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುರಿಸುವೆನು ಎಂದು ಭರವಸೆ ನೀಡುತ್ತಾನೆ **(ಮಲಾಕಿ 3:10,11)**.

ಆತ್ಮೀಯ ಮಕ್ಕಳೇ, ನಾನು ಈ ಪಾತ್ರವನ್ನು ಮುಗಿಸುವ ಮೊದಲು, ನಮ್ಮ ದೇಶಕ್ಕಾಗಿ, ರಾಜ್ಯಕ್ಕಾಗಿ ಮತ್ತು ವಿವಿಧ ಕ್ಷೇತ್ರದ ನಾಯಕರಿಗಾಗಿ ಪ್ರಾರ್ಥಿಸುವುದು ಸಭೆಯಾಗಿ ನಮ್ಮ ಜವಾಬ್ದಾರಿ ಎಂಬುದನ್ನು ನಾನು ನಿಮಗೆ ನೆನಪಿಸುತ್ತೇನೆ **(I ತಿಮೋಥಿ 2: 1-4)**. ಇದನ್ನು ಪ್ರಾಮಾಣಿಕವಾಗಿ ಅಭ್ಯಾಸಮಾಡೋಣ. ಹಿಂಸಾಚಾರ ಮತ್ತು ಅಸ್ಥಿರತೆಯಿಂದ ನಲುಗಿರುವ ಬಾಂಗ್ಲಾದೇಶಕ್ಕಾಗಿ ನಾವು ಪ್ರಾರ್ಥಿಸೋಣ - ಶಾಂತಿ ಮತ್ತು ಸ್ಥಿರತೆ ಶೀಘ್ರವಾಗಿ ಮರಳಲಿ. ದಯವಿಟ್ಟು ನೈಸರ್ಗಿಕ ವಿಕೋಪಗಳಿಂದ ಪೀಡಿತವಾಗಿರುವ ಪ್ರದೇಶಗಳಿಗಾಗಿ ಪ್ರಾರ್ಥಿಸಿರಿ. ನಮ್ಮ ಸೃಷ್ಟಿಕರ್ತ ದೇವರು ತಾನೇ ತನ್ನ ಜನರ ಮೇಲೆ ಕರುಣೆ ಮತ್ತು ದಯೆಯನ್ನು ನೀಡಲಿ.

ಅಂತಿಮವಾಗಿ, ಆತ್ಮೀಯ ಸಹೋದರ ಸಹೋದರಿಯರೇ, ಆಶೀರ್ವದಿಸಿದ ಸ್ಮರಣೆಯ ನಮ್ಮ ಮೆಟ್ರೋಪಾಲಿಟನ್ ಅಥನೇಷಿಯಸ್ ಯೋಹಾನ್ I ರವರು ಹೀಗೆ ಹೇಳುತ್ತಿದ್ದರು, ಅಪೊಸ್ತಲರ ಪುಸ್ತಕ ನಮ್ಮ ನೀಲನಕ್ಷೆಯಾಗಿದೆ; ಇದು ದಿಕ್ಸೂಚಿ, ನಮ್ಮ ಆರ್ಥೊಡಾಕ್ಸ್ ನಂಬಿಕೆಗೆ ಮೂಲಭೂತ ಮಾರ್ಗದರ್ಶಿಯಾಗಿದೆ. ಈ ಪುಸ್ತಕವನ್ನು ಆಗಾಗ್ಗೆ ಓದಿರಿ; ಮತ್ತು ನಾವು ಆ ತತ್ವಗಳನ್ನು ಪ್ರತ್ಯೇಕವಾಗಿ, ಸಾಮೂಹಿಕವಾಗಿ, ಸಭೆಯಾಗಿ ಅಳವಡಿಸಿಕೊಳ್ಳೋಣ ಮತ್ತು ಹೀಗೆ ಸಭೆಯಾಗಿ ಒಟ್ಟಾಗಿ ಅಭಿವೃದ್ಧಿಯಾಗೋಣ.

ಹೀಗೆ ನಾವು ಮುಂದೆ ಪ್ರಯಾಣ ಮಾಡುವಾಗ, ನಮ್ಮ ಕರ್ತನಾದ ಕ್ರಿಸ್ತ ಯೇಸುವಿನ ಮೇಲೆ ದೃಷ್ಟಿ ಹಾಯಿಸೋಣ, ಪ್ರತಿದಿನ ಆತನಿಗೆ ಆತನಿಗೆ ಇಷ್ಟವಾಗುವ ಜೀವನವನ್ನು ಜೀವಿಸುವುದರ ಮೂಲಕ ಪ್ರೀತಿಸುವ ಮತ್ತು ಆತನಿಗೆ ಸೇವೆಸಲ್ಲಿಸುವ ನಮ್ಮ ಧ್ಯೇಯದಲ್ಲಿ ಪವಿತ್ರಾತ್ಮನು ನಮಗೆ ಮಾರ್ಗದರ್ಶನ ನೀಡುವುದನ್ನು ಮುಂದುವರಿಸಲಿ ಮತ್ತು ನಮ್ಮ ಎಲ್ಲಾ ಪ್ರಯತ್ನಗಳು ಶಾಶ್ವತವಾದ ಫಲವನ್ನು ನೀಡಲಿ, ಪರಿಶುದ್ಧ ತ್ರೈಯೇಕ ದೇವರಾದ ತಂದೆ, ಮಗ ಮತ್ತು ಪವಿತ್ರಾತ್ಮನಿಗೆ ಸಕಲ ಕೀರ್ತಿ, ಮಾನ ಪ್ರಭಾವಗಳು, ಗೌರವ, ಆರಾಧನೆ ಈಗಲೂ ಮತ್ತು ಯಾವಾಗಲು ಸಲ್ಲಲಿ.

ಕ್ರಿಸ್ತನಲ್ಲಿ ನಿಮ್ಮ ತಂದೆ,

ಮೊರಾನ್ ಮೊರ್ ಸ್ಯಾಮ್ಯುಯೆಲ್ ಥಿಯೊಫಿಲೊಸ್
ಮೆಟ್ರೋಪಾಲಿಟನ್

**ದಿನಾಂಕ: 12 ಆಗಸ್ಟ್ 2024**
ಸ್ಥಳ: ವಿಶ್ವ ಸಭೆಯ ಪ್ರಧಾನ ಕಛೇರಿ